

## ಮಹಿಳಾದನಿಗೆ ರಾಜಕೀಯ ಬಲ

ರಾಜ್ಯ ವಿಧಾನಸಭೆಗಳು ಹಾಗೂ ಲೋಕಸಭೆಯಲ್ಲಿ ಮಹಿಳೆಯರಲ್ಲಿ ಶೇ. 33ರ ಮೀಸಲಾತಿ ಕಲ್ಪಿಸುವ ಮಹಿಳಾ ಮೀಸಲಾತಿ ಮಸೂದೆ ಲೋಕಸಭೆಯಲ್ಲಿ ಮಂಡನೆಯಾಗುವ ಮೂಲಕ, ರಾಜಕಾರಣದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯ ಸಾಧ್ಯತೆಯೊಂದು ಅನಾವರಣಗೊಂಡಿದೆ. ಸುಮಾರು ಮೂರು ದಶಕಗಳಿಂದ ಹಗ್ಗಜಗ್ಗಾಟದಲ್ಲಿದ್ದ ಮಹಿಳಾ ಮೀಸಲಾತಿ ಮಸೂದೆಯು ಸೆಪ್ಟೆಂಬರ್ 19ರಂದು ಲೋಕಸಭೆಯಲ್ಲಿ ಮಂಡನೆಗೊಂಡಿತು. ಮಹಿಳಾ ಮೀಸಲಾತಿ ಜಾರಿ ಪವಿತ್ರ ಕೆಲಸ ಎಂದು ಕೇಂದ್ರ ಸರ್ಕಾರ ಬಣ್ಣಿಸಿದೆ. ದೇಶದ ನೀತಿ ನಿರೂಪಣೆಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗೆ ಈ ಮೀಸಲಾತಿ ಅವಕಾಶ ಕಲ್ಪಿಸಲಿದೆ. ಆದರೆ, ಲೋಕಸಭೆಯ ಮುಂದೆ ಮಂಡನೆಗೊಂಡಿರುವ ಈ ಮಸೂದೆಗೆ ಅಂಗೀಕಾರ ದೊರೆತು, ಅದು ಕಾರ್ಯರೂಪಕ್ಕೆ ಬರಲು ಒಂದಷ್ಟು ಸಮಯ ಹಿಡಿಯಲಿದೆ. 2024ರ ಲೋಕಸಭಾ ಚುನಾವಣೆ, ನಂತರದ ಜನಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಚಟುವಟಿಕೆಗಳ ಹಿನ್ನೆಲೆಯಲ್ಲಿ ಮಸೂದೆ ಕಾಯ್ದೆಯಾಗಿ ಕಾರ್ಯರೂಪಕ್ಕೆ ಬರಲು ಕನಿಷ್ಠ ಎರಡು ಮೂರು ವರ್ಷಗಳೇ ಬೇಕಾಗಬಹುದು. 'ನಾರಿಶಕ್ತಿ' ಹೆಸರಿನ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೊಂಡ ನಂತರ ಹದಿನೈದು ವರ್ಷಗಳ ಚಾಲ್ತಿಯಲ್ಲಿರುತ್ತದೆ. ನಂತರ ಅದನ್ನು ವಿಸ್ತರಿಸುವ ಅವಕಾಶವಿದೆ.

### ಸಂಗೀತಕ್ಕೆ ಬೌದ್ಧಿಕ-ತಾಂತ್ರಿಕ ಸ್ಪರ್ಶ




ಶಾಸ್ತ್ರೀಯ ಸಂಗೀತ ಕಲಿತವರಿಗೆ, ಉದಯೋನ್ಮುಖರಿಗೆ ಈಗೀಗ ಹೆಚ್ಚಿನ ಅವಕಾಶ ಸಿಗುತ್ತಿದೆ. ಸಂಗೀತ ಕಲಿಯಬೇಕು ಎನ್ನುವ ತುಡಿತ ಮಕ್ಕಳಲ್ಲಿ ಹೆಚ್ಚಿದೆ. ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತು ಸಾಧನೆ ಮಾಡಿದರೆ ಮುಂದೆ ಸಿನಿಮಾ ಕ್ಷೇತ್ರದಲ್ಲೂ ಅವಕಾಶ ಪಡೆಯಬಹುದು ಎಂಬ ಭಾವನೆ ಎಳೆಯರಲ್ಲಿ ಇರುವ ಕಾರಣ, ಜೊತೆಗೆ ಪೋಷಕರ ಪ್ರೋತ್ಸಾಹ, ಬೆಂಬಲವೂ ಇದ್ದ ಕಾರಣ ಸಂಗೀತ, ನೃತ್ಯಗಳಂತಹ ಲಲಿತಕಲೆಗಳಲ್ಲಿ ಮಕ್ಕಳ ತೊಡಗಿಸಿಕೊಳ್ಳುವಿಕೆ ಹೆಚ್ಚಾಗಿದೆ. ಇದು ಸಂಗೀತ ಕ್ಷೇತ್ರದಲ್ಲಾದ ಉತ್ತಮ ಬೆಳವಣಿಗೆ.

ಸಂಗೀತ ಕಲಿತವರಿಗೆ ವಿಪುಲ ಅವಕಾಶಗಳಿವೆ. ಅದು ಬೆಂಗಳೂರು ಹಬ್ಬ, ಸರ್ಕಾರಿ ಉತ್ಸವವೇ ಆಗಿರಬಹುದು, ಖಾಸಗಿ ಸಂಘಟನೆಗಳು ನಡೆಸಿಕೊಡುವ ಸಂಗೀತ ಕಛೇರಿಗಳೇ ಆಗಿರಬಹುದು. 2023ರಲ್ಲಿ ಒಂದೇ ಬ್ಯಾನರ್ ಅಡಿಯಲ್ಲಿ ಬೆಂಗಳೂರಿನ ಹಲವು ಭಾಗಗಳಲ್ಲಿ ಏಕಕಾಲಕ್ಕೆ ಸಂಗೀತ ಕಛೇರಿಗಳು ಏರ್ಪಾಡಾಗಿ ನೂರಾರು ಕಲಾವಿದರಿಗೆ ಅವಕಾಶ ಒದಗಿಬಂತು. ಇಂಥ ಬೆಳವಣಿಗೆ ಮುಂದೆಯೂ ಆದರೆ 'ಸಂಗೀತ ನಶಿಸಿಹೋಗುತ್ತಿದೆ, ಪಾರಂಪರಿಕ ಸಂಗೀತಕ್ಕೆ ಉಳಿಗಾಲವಿಲ್ಲ' ಎಂಬ ಮಾತೇ ಬರುವುದಿಲ್ಲ.

ತಾಂತ್ರಿಕವಾಗಿಯೂ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಸ್ಟುಡಿಯೊದಲ್ಲಿ ಹೊಸ ತಂತ್ರಜ್ಞಾನ ಬಳಕೆಯಾಗುತ್ತಿದೆ. ಅದು ಮೈಕ್‌ನಿಂದ ಹಿಡಿದು ವಾಯ್ಸ್ ಮಿಕ್ಸರ್‌ವರೆಗೆ ತಂತ್ರಜ್ಞಾನದ ಬಳಕೆಯಿಂದ ಗುಣಮಟ್ಟದ ಸಂಗೀತ ಹೊರಗೆ ಬರಲು ಸಾಧ್ಯವಾಗಿದೆ. ಒಟ್ಟಿನಲ್ಲಿ ಸಂಗೀತ ಸಾಕ್ಷಾತ್ಕಾರಕ್ಕೆ ಅಭಿವೃದ್ಧಿ ಅಗತ್ಯ. ಇದು 2023ರಲ್ಲಿ ಸಾಕಷ್ಟು ಆಗಿದೆ. ಮುಂದೆಯೂ ಆಗಿ ಸಂಗೀತ ಕ್ಷೇತ್ರ ವಿಶಾಲವಾಗಿ ಹಬ್ಬಿ ನಾದದ ಕಂಪನ್ನು ಹರಡಲಿ ಎಂಬುದೇ ನನ್ನ ಹಾರೈಕೆ.

**-ಸಂಗೀತಾ ಕಟ್ಟಿ, ಹಿಂದೂಸ್ತಾನಿ ಗಾಯಕಿ**

## ಜನಸಂಖ್ಯೆಯಲ್ಲಿ ನಂ.1

ಜನಸಂಖ್ಯೆಯಲ್ಲಿ ಚೀನಾದ ಪಾರಮ್ಯವನ್ನು ಮೀರಿ ಭಾರತ ನಂ. 1 ಸ್ಥಾನ ಅಲಂಕರಿಸಿದ ವಿದ್ಯಮಾನಕ್ಕೂ 2023 ಸಾಕ್ಷಿಯಾಯಿತು. ಏಪ್ರಿಲ್ ತಿಂಗಳಲ್ಲಿ 1.486 ಶತಕೋಟಿ ಜನಸಂಖ್ಯೆಯನ್ನು ದಾಖಲಿಸುವ ಮೂಲಕ ಭಾರತ ಚೀನಾವನ್ನು ಹಿಂದಿಕ್ಕಿತು.



## ತೆರಿಗೆ ಪದ್ಧತಿ: ಇದು ಸಂಕ್ರಮಣ ಸಮಯ

ದೀರ್ಘ ಕಾಲದಿಂದ ಜಾರಿಯಲ್ಲಿದ್ದ ಆದಾಯ ತೆರಿಗೆ ಪದ್ಧತಿಯಲ್ಲಿ ಏಪ್ರಿಲ್ 1ರಂದು ಆರಂಭಗೊಂಡ ಆರ್ಥಿಕ ವರ್ಷದಿಂದ ಬದಲಾವಣೆಗಳು ಕಾಣಿಸಿಕೊಂಡವು. ಆದಾಯ ತೆರಿಗೆದಾರರಿಗೆ 'ಹೊಸ ತೆರಿಗೆ ಪದ್ಧತಿ'ಯನ್ನು ಪರಿಚಯಿಸಿದ ಕೇಂದ್ರ ಸರ್ಕಾರ, ಹಳೆಯ ತೆರಿಗೆ ಪದ್ಧತಿಯನ್ನೂ ಉಳಿಸಿಕೊಂಡಿದೆ. ಹೊಸತು ಅಥವಾ ಹಳೆಯ ಪದ್ಧತಿಗಳಲ್ಲಿ ತಮಗೆ ಸೂಕ್ತ ಕಂಡಿದ್ದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ತೆರಿಗೆದಾರರಿಗಿದೆ. ಹೊಸ ತೆರಿಗೆ ವ್ಯವಸ್ಥೆಯಲ್ಲಿ ₹ 7 ಲಕ್ಷದವರೆಗಿನ ಆದಾಯಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಸಿಗುತ್ತದೆ. ಆದರೆ, 1.5 ಲಕ್ಷದವರೆಗಿನ ಸಣ್ಣ ಉಳಿತಾಯ ಸೇರಿ ಯಾವುದೇ ರೂಪದ ಉಳಿತಾಯಕ್ಕೂ ತೆರಿಗೆ ವಿನಾಯಿತಿ ದೊರೆಯುವುದಿಲ್ಲ.

